# “ಸ್ಪಾಂಡಿಲೋಸಿಸ್ ಸಮಸ್ಯೆಗೆ ಚಿಕಿತ್ಸೆ ನೀಡುವಲ್ಲಿ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ನುರಿತ ಅನುಭವಿಯಾಗಿದೆ”

**ಡಾ. ಶ್ರೀಕಾಂತ್ ಮೋರ್ಲಾವರ್**
ಸಿಎಂಡಿ
ಹೋಮಿಯೋಕೇರ್ ಇಂಟರ್‌ನ್ಯಾಷನಲ್



ಆಧುನಿಕ ಜೀವನವು ಅದೆಷ್ಟು ವೇಗವಾಗಿ ಬೆಳೆಯುತ್ತಿದೆಯೊ, ಅದಕ್ಕೆ ಸಮನಾದ ವೇಗದಲ್ಲಿ ನಾವು ನಮ್ಮ ಜೀವನಶೈಲಿಯನ್ನು ನಿರ್ವಹಿಸಬೇಕಾಗಿದೆ. ದಿನನಿತ್ಯ ಸುದೀರ್ಘ ಕಾಲದವರೆಗೆ ಕಂಪ್ಯೂಟರ್ ಎದುರು ಕುಳಿತುಕೊಂಡಿರುವುದು, ಸಂಚಾರ ದಟ್ಟನೆಯುಳ್ಳ ರಸ್ತೆಗಳಲ್ಲಿ ದೂರದವರೆಗೆ ವಾಹನಗಳಲ್ಲಿ ಪ್ರಯಾಣಿಸುವುದು, ಅಧಿಕ ಒತ್ತಡಭರಿತ ಸಂದರ್ಭಗಳ ಎದುರಿಸುವಿಕೆಯನ್ನು ಒಳಗೊಂಡಿರುವ ಇಂದಿನ ಆಧುನಿಕ ಜೀವನಶೈಲಿಯಿಂದಾಗಿ ಮತ್ತು ಇನ್ನೂ ಅನೇಕ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ದೈಹಿಕ ಭಾವ ಭಂಗಿಗಳು ಮನುಷ್ಯನ ಶರೀರಕ್ಕೆ ಆಧಾರಸ್ಥಂಭವಾಗಿರುವ ಬೆನ್ನುಮೂಳೆಯ ಮೇಲೆ ಆತಂಕಕಾರಿ ಪರಿಣಾಮ ಬೀರುವಂತಾಗಿವೆ. ಹೀಗಾಗಿ ಬೆನ್ನುಮೂಳೆ ಘಾಸಿಗೊಳ್ಳುವಲ್ಲಿ ಸ್ಪಾಂಡಿಲೋಸಿಸ್ ಒಂದು ಸಾಮಾನ್ಯ ಕಾರಣವಾಗಿಬಿಟ್ಟಿದೆ.

## ಸ್ಪಾಂಡಿಲೋಸಿಸ್ ಎಂದರೇನು?

**ಬೆನ್ನೆಲುಬಿನ ಸಂಧಿವಾತದಿಂದ ಬೆನ್ನುಹುರಿಯ ಸ್ಥಿತಿಗತಿಗಳು ಕ್ಷೀಣಗೊಳ್ಳುವ ಸರಣಿಗಳನ್ನು ವಿವರಿಸುವ ಶಬ್ದವೇ ಸ್ಪಾಂಡಿಲೋಸಿಸ್. ಸ್ಪೈನಲ್ ಸ್ಟೆನೋಸಿಸ್ (ಬೆನ್ನೆಲುಬಿನ ನಾಳಗಳು ಕಿರಿದಾಗುವುದು) ಅಥವಾ ಡಿಸ್ಕ್ ಕ್ಷೀಣಗೊಳ್ಳುವ ಕಾಯಿಲೆಯ ರೂಪದಲ್ಲಿ ಈ ಸ್ಪಾಂಡಿಲೋಸಿಸ್ ಎಂಬುದು ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಸ್ಪೈನಲ್ ಒಸ್ಟಿಯೋಆರ್ಥ್ರಿಟಿಸ್ ಮತ್ತು ಲುಂಬಾರ್ ಸ್ಪೈನ್ ಸಮಸ್ಯೆ ಹೊಂದಿರುವ, ಸುಮಾರು 50 ವರ್ಷಗಳಿಗೆ ಮೇಲ್ಪಟ್ಟ ರೋಗಿಗಳಲ್ಲಿ ಸಾಮಾನ್ಯವಾಗಿ ಸ್ಪಾಂಡಿಲೋಸಿಸ್ ಸಮಸ್ಯೆ ಗೋಚರಿಸುತ್ತದೆ. ಸ್ಪಾಂಡಿಲೋಸಿಸ್ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳು ಸಾಮಾನ್ಯವಾಗಿ ತಮ್ಮ ಕೆಳಬೆನ್ನಿನಲ್ಲಿ ತೀವ್ರವಾದ ನೋವು ಅನುಭವಿಸುತ್ತಿರುತ್ತಾರೆ ಅಥವಾ ಬೆನ್ನಿನ ಕೆಲವು ನಿರ್ದಿಷ್ಟ ಚಲನೆಗಳಲ್ಲಿ ಗಂಭೀರವಾದ ಯಾತನೆ ಅನುಭವಿಸುತ್ತಿರುತ್ತಾರೆ.**

## ಸ್ಪಾಂಡಿಲೋಸಿಸ್ ವಿಧಾನಗಳು:

**ಬೆನ್ನೆಲುಬು ಕ್ಷೀಣಿಸುವ ವಿಭಿನ್ನ ರೀತಿಗಳನ್ನು ವಿವರಿಸಲು ಸಾಮಾನ್ಯವಾಗಿ ಸ್ಪಾಂಡಿಲೋಸಿಸ್ ಎಂಬ ಶಬ್ಧವನ್ನು ಬಳಸಲಾಗುತ್ತದೆ. ತೀವ್ರತರವಾದ ಕತ್ತು ನೋವು, ಬೆನ್ನು ನೋವು ಅಥವಾ ಬೆನ್ನುಹುರಿಗೆ ಸಂಬಂಧಿತ ರೋಗಲಕ್ಷಗಳನ್ನು ನಿಖರವಾಗಿ ಗುರುತಿಸುವ ನಿಟ್ಟಿನಲ್ಲಿ ಸ್ಪಾಂಡಿಲೋಸಿಸ್ ವಿಧಾನಗಳು ರೂಪಗೊಂಡಿವೆ - ಡಿಜನರೇಟೀವ್ ಡಿಸ್ಕ್ ಡಿಸೀಸ್ (ಡಿಡಿಡಿ), ಫಾಸೆಟ್ ಡಿಸೀಸ್, ಸ್ಪೈನಲ್ ಸ್ಟೆನೋಸಿಸ್, ಲುಂಬಾರ್ ಸ್ಪಾಂಡಿಲೋಸಿಸ್ ಮತ್ತು ಸರ್ವಿಕಲ್ ಸ್ಪಾಂಡಿಲೋಸಿಸ್.**



## ಸ್ಪಾಂಡಿಲೋಸಿಸ್ ಸಮಸ್ಯೆಗೆ ಕಾರಣಗಳೇನು?

**ಅಧಿಕಗೊಳ್ಳುತ್ತಿರುವ ಪ್ರಾಯ, ಬೆನ್ನಹುರಿಗೆ ಬಾಹ್ಯ ಏಟುಗಳು, ಅತಿಯಾದ ಭಾರವನ್ನು ಎತ್ತುವುದು, ಒಂದೇ ಭಂಗಿಯಲ್ಲಿ ಸುದೀರ್ಘ ಕಾಲ ಕುಳಿತಿರುವುದು, ದ್ವಿಚಕ್ರ ವಾಹನಗಳಲ್ಲಿ ಅತಿಯಾದ ಪ್ರಯಾಣ, ಬಹು ಎತ್ತರದ ಅಥವಾ ಗಡುಸಾದ ತಲೆದಿಂಬು ಬಳಸುವುದು ಮತ್ತು ಫೋನ್‌ನಲ್ಲಿ ಮಾತನಾಡುವಾಗ ಒಂದೇ ಬದಿಗೆ ಕತ್ತನ್ನು ತಿರುಗಿಸಿ ಮಾತನಾಡುವುದು ಇತ್ಯಾದಿ ಅಭ್ಯಾಸಗಳು ಕತ್ತು ನೋವು ಮತ್ತು ಬೆನ್ನು ನೋವಿಗೆ ಕಾರಣವಾಗುತ್ತವೆ.**

## ಸ್ಪಾಂಡಿಲೋಸಿಸ್ ಸಮಸ್ಯೆಯ ರೋಗ ಲಕ್ಷಣಗಳೇನು?

**ಸಹಜ ಸ್ಪಾಂಡಿಲೋಸಿಸ್ ಪ್ರಕರಣಗಳಲ್ಲಿ ಯಾವುದೇ ರೋಗ ಲಕ್ಷಣಗಳು ಗೋಚರಿಸುವುದಿಲ್ಲ. ವಾಸ್ತವ ಏನೆಂದರೆ, ಸುಮಾರು 70 ವರ್ಷ ಪ್ರಾಯದ ಬಹುತೇಕ ಜನರು ತಮಗೇ ಅರಿವಿಲ್ಲದಂತೆ ಸ್ಪಾಂಡಿಲೋಸಿಸ್‌ಗೆ ಈಡಾಗಿರುತ್ತಾರೆ. ಅದಾಗ್ಯೂ, ತೀವ್ರತರವಾದ ಸ್ಪಾಂಡಿಲೋಸಿಸ್ ಸಮಸ್ಯೆಗೆ ಈಡಾದವರು ಬೆನ್ನೆಲುಬಿನಲ್ಲಿ ಬಿಗಿತ ಮತ್ತು ನೋವಿನಿಂದ ಬಳಲುತ್ತಿರುತ್ತಾರೆ. ಈ ರೋಗ ಲಕ್ಷಣಗಳು ಕೂಡ ಸ್ಪಾಂಡಿಲೋಸಿಸ್ ವಿಧಾನದ ಮೇರೆಗೆ ವಿಭಿನ್ನವಾಗಿರುತ್ತವೆ. ಸರ್ವಿಕಲ್ ಸ್ಪಾಂಡಿಲೋಸಿಸ್: ಈ ರೀತಿಯ ಸಮಸ್ಯೆಯಲ್ಲಿ ಸಾಮಾನ್ಯವಾಗಿ ಕತ್ತಿನಲ್ಲಿ ಸಣ್ಣ ನೋವಿನಿಂದ ತೀವ್ರವಾದ ನೋವು, ಭುಜಗಳಲ್ಲಿ ನೋವು ಕಾಣಿಸಿಕೊಂಡು ಕೈಯಿಂದ ಬೆರಳುಗಳವರೆಗೂ ಹರಡುವ, ಕತ್ತು ಬಿಗಿತ ಮತ್ತು ಚಲನೆಗಳ ನಿರ್ಬಂಧ ಅಥವಾ ಕತ್ತಿನಲ್ಲಿ ಜೋಮು ಹಿಡಿಯುವುದು, ಕೆಲವೊಮ್ಮೆ ತಲೆನೋವು, ನಿಶ್ಶಕ್ತಿ, ಪಿತ್ತಸಂಕಟ, ವಾಕರಿಕೆಯಂತಹ ಲಕ್ಷಣಗಳು ಕೂಡ ಗೋಚರಿಸುತ್ತವೆ. ಲುಂಬಾರ್ ಸ್ಪಾಂಡಿಲೋಸಿಸ್: ಬೆನ್ನು ನೋವು ಅಥವಾ ಸೆಳೆತಗಳು, ಬಾಗುವಾಗ ಅಥವಾ ತಿರುಗುವಾಗ ನೋವಿನ ಅನುಭವ, ಅಂಡುಗಳಿಂದ ಕಾಲುಗಳತ್ತ ನೋವಿನ ಮುಂದುವರಿಕೆ, ಕಾಲುಗಳು ಜೋಮು ಹಿಡಿಯುವ ಅಥವಾ ಸಮತೋಲನತೆ ಕಳೆದುಕೊಳ್ಳುವಂತಹ ಕೆಲವು ಲಕ್ಷಣಗಳು ಈ ಸಮಸ್ಯೆಯಲ್ಲಿ ಕಂಡುಬರುತ್ತವೆ.**

## ಸ್ಪಾಂಡಿಲೋಸಿಸ್ ಪತ್ತೆ ಮಾಡುವ ತಪಾಸಣೆಗಳು ಯಾವು?

**ಈ ಕೆಲವು ತಪಾಸಣೆಗಳನ್ನು ಕೈಗೊಳ್ಳುವ ಮೂಲಕ ಸ್ಪಾಂಡಿಲೋಸಿಸ್ ಸಮಸ್ಯೆಯನ್ನು ಪತ್ತೆ ಮಾಡಬಹುದಾಗಿದೆ: ಸಿ.ಬಿ.ಪಿ., ಎಕ್ಸ್-ರೇ, ಸಿ.ಟಿ.ಸ್ಕ್ಯಾನ್, ಎಂ.ಆರ್.ಐ ಸ್ಕ್ಯಾನ್, ಹೆಚ್.ಎಲ್.ಎ.ಬಿ.27 ಮತ್ತು ಕೈಗಳ ಹಾಗೂ ಕಾಲುಗಳ ಚಲನೆ/ಪ್ರತಿವರ್ತನೆಯ ಪರೀಕ್ಷೆಗಳು.**

**ಹೋಮಿಯೋಕೇರ್ ಚಿಕಿತ್ಸೆ:** **ಸ್ಪಾಂಡಿಲೋಸಿಸ್ ಸಮಸ್ಯೆಯಿಂದ ಬಳಲುತ್ತಿರುವ ಸಾಕಷ್ಟು ರೋಗಿಗಳಿಗೆ ಚಿಕಿತ್ಸೆ ನೀಡಿ, ಆ ಸಮಸ್ಯೆಯನ್ನು ಒಂದು ನೈಸರ್ಗಿ ವಿಧಾನದಲ್ಲಿ ನಿಯಂತ್ರಣಕ್ಕೆ ಒಳಪಡಿಸುವ ನಿಟ್ಟಿನಲ್ಲಿ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಾಕಷ್ಟು ಅನುಭವ ಹೊಂದಿದೆ. ಜೆನೆಟಿಕ್ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆಯ ಮೂಲಕ ರೋಗಿಯ ಮಾನಸಿಕ ಹಾಗೂ ದೈಹಿಕ ಸ್ಥಿತಿಗತಿಗಳನ್ನು ಪರಿವೀಕ್ಷಿಸುವುದು ಮತ್ತು ಪರಿವೀಕ್ಷಣೆಯ ಫಲಿತಾಂಶದ ಮೇರೆಗೆ ಚಿಕಿತ್ಸೆ ನೀಡುವ ಮೂಲಕ ಬೆನ್ನುಹುರಿಯನ್ನು ಬಲಪಡಿಸಲಾಗುತ್ತದೆ ಹಾಗೂ ಸ್ಪಾಂಡಿಲೋಸಿಸ್ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಶಮನಗೊಳಿಸಲಾಗುತ್ತದೆ.**

ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಶುಲ್ಕ ರಹಿತ **1800 108 1212**

ಉಚಿತ ಸಮಾಲೋಚನೆ **955 000 1133**

www.homeocare.in